10. ಯಾವ ತಾಲಿಂಖಾನೆಯನ್ನಾಗಲಿ ಪೊಲೀಸಿನವರು ಯಾವ ಕಾಲದಲ್ಲಾಗಲಿ ಹೋಗಿ ನೋಡಲಿಕ್ಕೆ ಅವರಿಗೆ ಪೂರಾ ಅಪ್ಪಣೆ ಯಿರತಕ್ಕದ್ದು.

11. ಸ್ಥಳಾಧಿಕಾರ ವಿರುವ ಮೇಜಸ್ಟ್ರೇಟರ ಮುಖ್ಯವಾದ ಅಪ್ಪಣೆ ಹೊರ್ತು ಯಾವ ತಾಲಿಂಖಾನೆಯಾಗಲಿ, ರಾತ್ರಿ ಕಾಲದೊಳಗೆ 9 ಘಂಟೆಗೆ ಮೇಲೆ ತೆರದಿರಲಿಕ್ಕೆ ಅಪ್ಪಣೆ ಕೊಡಲ್ಪಡಕೂಡದು ಸದರೀ ಮುಖ್ಯವಾದ ಅಪ್ಪಣೆಯನ್ನು ಯಾವಾಗಲೂ ಪಡೆಯತಕ್ಕದ್ದು.

12. ಮೇಲೆ ವಿಧಿಸಲ್ಪಟ್ಟಿರುವ ನಿಬಂಧನೆಗಳ ಪೈಕಿ ಯಾವ ನಿಬಂಧನೆಯನ್ನಾಗಲಿ ಉಲ್ಲಂಘನೆ ಮಾಡಿದರೆ ತಾಲಿಂಖಾನಾ ಯಜಮಾನನು ತನ್ನ ಲೈಸೆನ್ಸನ್ನು ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುತ್ತಾನೇ· ಸದರೀ ಲೈಸೆನ್ಸನ್ನು ಡಿಸ್ಟ್ರಿಕ್ಟ ಕಮ್ಮಿಷನರವರು ಯಾವಾಗಲಾದರೂ ಹಿಂತಿರಿಗಿಸಿ ಕೊಳ್ಳಬಹುದು,

13. ಜನಗಳ ಕ್ಷೇಮಾರ್ಥವಾಗಿ ಯಾವ ತಾಲಿಂಖಾನೆಯನ್ನಾಗಲಿ ಬಂದ್ ಮಾಡಿಸುವದು ಮಾಜಿಸ್ಟ್ರೇಟರಿಗೆ ಆವಶ್ಯಕ ವೆಂದು ತೋರಿದರೆ ಅಂತಾ ಯಾವ ತಾಲಿಂಖಾನೆಯನ್ನಾಗಲಿ ಯಾವಾಗಲಾದರೂ ಬಂದ್ ಮಾಡಿಸಲಿಕ್ಕೆ ಈ ರೂಲ್ಸಗಳಲ್ಲಿ ಅಡಗಿರತಕ್ಕ ಯಾವದೂ ಡಿಸ್ಟ್ರಿಕ್ಟ ಮಾಜಿಸ್ಟ್ರೇಟರನ್ನಾಗಲಿ, ಕಂಟೋ೯ಮೆಂಟ್‌ಮೇಜಸ್ಟ್ರೇಟರನ್ನಾಗಲಿ ಪಟ್ಟಣ ಮಾಜಸ್ಟ್ರೇಟರನ್ನಾಗಲಿ, ಅಡ್ಡೀ ಪಡಿಸತಕ್ಕದ್ದಲ್ಲವು.

14. ಈ ರೂಲ್ಸಗಳ ವೊಂದುನಕಲ್ ಪ್ರತಿ ತಾಲಿಂಖಾನಾ ಯಜಮಾನನ ಸುಫರ್ದಿನಲ್ಲಿಡಲ್ಪಡತಕ್ಕದ್ದು.

"ಬಮೋಜಿಬ್ ಹುಕ್ಕುಂ,"
T. CLARKE,
Offg. Secretary.

ಪಬ್ಲಿಕ ವರ್ಕ್ಸ.

ನಂ· 116. ತಾರೀಖು 8ನೇ ಫಿಬ್ರವರೀ 1876.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಬಿಡದೀಯಲ್ಲಿರುವ ಮುಸಾಫರ್ ಬಂಗ್ಲೇಯು 2ನೇ ಕ್ಲಾಸ್ ಬಂಗ್ಲೇಯಾಗಿ ಮಾಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"
R. H. SANKEY, *Liuet-Col., R. E.,*
Secretary, P. W. D.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 25. ತಾರೀಖು 3ನೇ ಫಿಬ್ರವರೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ನಾಲಕ್‌ನಾಡು ಮಜಲಿಗೆ ಕೇರಿದ ಈ ಕೆಳಗೆ ವಿವರಿಸಿ ಇರುವ ಸರಹದ್ದಿನ ಒಳಗೆ ಇರುವ ತೋಟಗಳನ್ನು ಮೂರು ವರುಷಕ್ಕೆ ಅಂದರೆ, ಸ್ರ 1876ನೇ ಇಸವಿ ಏಪ್ರೆಲ್ ಗುರ್ರೇ ತಾರೀಖು ಲಾಗಾಯತು ಸ್ರ 1879ನೇ ಇಸವಿ ಮಾರ್ಚೀ 31ನೇ ತಾರೀಖಿನ ವರಿವಿಗೂ ಗೇಣಿ ಕೊಡಲಿಕ್ಕೊಸ್ಕರ ಮಡಿಕೆರೆಯಲ್ಲಿ ಸೂಪ್ರಿಟೆಂಡೆಂಟ್ ಕಚ್ಚೇರಿಯಮುಂದೆ, ಸ್ರ 1876ನೇ ಇಸವಿ ಮಾರ್ಚೀ ಗುರ್ರೇ ತಾರೀಖಿನಲ್ಲಿ ಹರಾಜು ಹಾಕಲ್ಪಡುತ್ತೆ.

2. ಹರಾಜುಕಾಲದಲ್ಲಿ ಹರಾಜಿನಲ್ಲಿ ಪಡೆಕೊಂಡವನು ನೂರು ರೂಪಾಯಿ ಠೇವಣಾತಿ ಇಡಬೇಕು, ಇಲ್ಲವಾದರೆ ಹರಾಜು ರದ್ದುಪಡಿಸಿ ಗೇಣೀಯನ್ನು ಪುನಹಾ ಹರಾಜು ಹಾಕಲ್ಪಡುವದು.

3. ಸೂಪ್ರಿಟೆಂಡೆಂಟ್ ಸಾಹೆಬರವರ ಹುಕ್ಕುಂ ಇಲ್ಲದೆ ತೋಟದ ಬಳಗೆ ಇರುವ ಕಾಡುಮರವನ್ನಾಗಲಿ ಫಲವೃಕ್ಷಗಳನ್ನಾಗಲಿ ಕಡಿಯಕೂಡದು.

4. ಹರಾಜಿನ ಮೊಬಲಗನ್ನು ಮೂರು ಖಿಸ್ತಾಗಿ ಮೂರು ವರುಷದಲ್ಲಿ ಆಯಾಯ ವರುಷದ ಮಾರ್ಚೀ ಗುರ್ಸೀ ತಾರೀಖಿನಲ್ಲಿ ಕೊಡತಕ್ಕದ್ದು.

5. ಸ್ಯ 1878—79ನೇ ಇಸವಿಯ ಆಖ್ಯೈರು ಖಿಸ್ತಿನ ಹಣವನ್ನು ಸಲಿಕೆ ಮಾಡಿದ ಕೂಡ್ಲೇ ಶೇವಣಾತಿಯಾಗಿ ಯಿಟ್ಟಿರುವ 100 ರೂಪಾಯಿ ಯನ್ನು ವಾಪಸು ಕೊಡಲ್ಪಡುವದು.

6. ಸಾಲೀಯಾನಾ ಕೊಡತಕ್ಕ ಖಿಸ್ತು ಆಯಾಯ ವರುಷದ ಮಾರ್ಚೀ ಗುರ್ಸೀ ತಾರೀಖಿಗೆ ಸರಿಯಾಗಿ ಕೊಡದೆ ಹೋದರೆ ಸೂಪ್ರಿಟೆಂಡೆಂಟ್ ಸಾಹೆಬರವರಿಂದಾ ಗೇಣಿ ರದ್ದು ಮಾಡಲ್ಪಟ್ಟು ಫಸಲ್ ಜಪ್ತು ಮಾಡಲ್ಪಡುವದು, ಮತ್ತು ಶೇವಣಾತಿಯಿಟ್ಟ 100 ರೂಪಾಯಿ ಸರಕಾರಕ್ಕೆ ತೆಗದು ಕೊಳ್ಳಲ್ಪಡುವದು.

ಜಕ್ಕು ಬಂದಿ.

ಕೀರತೋಟ, ಅಂದಾಜು 6 ಯಕರೆ ವುಳ್ಳದ್ದು.

ವುತ್ತರಕ್ಕೆ ಅರಮನೇ ಕಡಂಗಾ.
ದಕ್ಷಿಣಕ್ಕೆ ಮಹಲಿನಿಂದಾ ವೀರ ರಾಜೇಂದ್ರ ಪೇಟೆಗೆ ಹೋಗುವ ಮಾರ್ಗ.
ಪೂರ್ವಕ್ಕೆ ಅರಮನೇ ಕಡಂಗಾ.
ಪಶ್ಚಿಮಕ್ಕೆ ಮಹಲಿನಿಂದ ಮಡಿಕೆರೆಗೆ ಹೋಗುವ ಮಾರ್ಗ.

ಮಲೇ ತೋಟ, ಅಂದಾಜ್ ಯರಡು ಯಕರೆ ವುಳ್ಳದ್ದು.

ವುತ್ತರಕ್ಕೆ ಬಾರೆ.
ದಕ್ಷಿಣಕ್ಕೆ ಮಾರ್ಗ ಮತ್ತು ಅರಮನೆ.
ಪೂರ್ವಕ್ಕೆ ಬಾರೆ ಮತ್ತು ಮಹಲ್‌ನಿಂದ ಮಡಿಕೆರೆಗೆ ಹೋಗುವ ಮಾರ್ಗ.
ಪಶ್ಚಿಮಕ್ಕೆ ಬಾರೆ ಮತ್ತು ಕರೆಂಟಬಾಣಿಗೆ ಹೋಗುವ ಕಾಲುದಾರಿ.

ಕಾರಖಾನೆ ಮತ್ತು ಗುಡ್ಡದ ತೋಟ, ಅಂದಾಜ್ ನಾಲ್ಕು ಯಕರೆ.

ವುತ್ತರಕ್ಕೆ ಅರಮನೆ ಮತ್ತು ಅರಮನೇಯಿಂದಾ ವೀರರಾಜೇಂದ್ರ ಪೇಟೆಗೆ ಹೋಗುವ ಮಾರ್ಗ.
ದಕ್ಷಿಣಕ್ಕೆ ಕುಟ್ಟನ ಕಲ್ಲಿ ಹೊಳೆ.
ಪೂರ್ವಕ್ಕೆ ಅರಮನೇ ಕಡಂಗಾ ಮತ್ತು ಹೊಳೆ.
ಪಶ್ಚಿಮಕ್ಕೆ ಬಾರೆ.

ನಂ. 26. ತಾರೀಖು 3ನೇ ಫಿಬ್ರವರೀ 1876.

3ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೆಪ್ಟ್ ಮಗ್ಯಾತ್ ಸಾಹೆಬರು, ಮೈಸೂರು ಕಮ್ಮಿಷನ್ನಲ್ಲಿ 1ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಯಂಬ ತಮ್ಮ ಉದ್ಯೋಗಕ್ಕೆ ವಾಪಸ್ ಬರುವೆ. ಮೇಜರ್ ಲೋರ್ಗ್ ಸಾಹೆಬರಿಗೆ ಬದಲಾಗಿ ಕೊಡಗು ಫಸ್ಟ್ ಅಸಿಸ್ಟೆಂಟ್ ಸೂಪ್ರಿಟೆಂಡೆಂಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 27. ತಾರೀಖು 8ನೇ ಫಿಬ್ರವರೀ 1876.

ಕೊಡಗು ಸೂಪ್ರಿಟೆಂಡೆಂಟ್ ಮೇಜರ್ ತಾವುರ್ಸ ಸಾಹೆಬರು ಸೂಪ್ರಿಟೆಂಡೆಂಟ್ ಆಫಿಸ್‌ವ ಕೊಡಗು ಟ್ರೆಜರೀ ಚಾರ್ಜನ್ನು 1876ನೇ ಇಸವಿ ಫಿಬ್ರವರೀ 4ನೇ ಮರ್ತುಂ ಮಧ್ಯಾನ್ಹಕ್ಕೆ ಪೂರ್ವ ಮೇಜರ್ ಲೋರ್ಗ್ ಸಾಹೆಬರಿಂದ ಪುನ್ಹ ತೆಗದುಕ್ಕೊಂಡರು.

ನಂ. 28. ತಾರೀಖು 9ನೇ ಫಿಬ್ರವರೀ 1876.

ಕೊಡಗು ಸೂಪ್ರಿಟೆಂಡೆಂಟ್ ಮೇಜರ್ ತಾವುರ್ಸ ಸಾಹೆಬರು, ಫರಲೋ ರಜಾದ ಮೇಲೆ ವಿಲಾಯಿತಿಗೆ ಹೋಗಲು ಸನ್ನಾಹ ಮಾಡಿಕೊಳ್ಳುವ ಬಗ್ಯೆ, ಅವರು ಪ್ರಯಾಣ ಮಾಡಿದ ತಾರೀಖು ಲಾಗಾಯತು 15 ದಿವಸಗಳ ಸಬ್‌ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತಾರೆ.

2ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ವ ಹಾಸನ ಡಿಸ್ಟ್ರಿಕ್ಟ್ ಆಫಿಷಿಯೇಟಿಂಗ್ ಡಿಪ್ಯುಟಿ ಕಮ್ಮಿಷನರ್ ಕೆಪ್ಟ್ ಷಾ ಸಾಹೆಬರು, ಇಂಡ್ಯ ಗವರ್ಮೆಂಟಿನವರ ಮಂಜೂರಾತೀಗೆ ವೊಳಪಟ್ಟು, ರಜಾದ ಮೇಲೆ ಯಿರುವ ಮೇಜರ್ ತಾಮರ್ಸ ಸಾಹೆಬರ ಗೈರ್ ಹಾಜರೀಯೆಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಕೊಡಗು ಸೂಪ್ರಿಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 29. ತಾರೀಖು 11ನೇ ಫಿಬ್ರವರೀ 1876.

ಕೊಡಗು ಸೂಪ್ರಿಟೆಂಡೆಟ್ ಮೇಜರ್ ತಾಮರ್ಸ ಸಾಹೇಬರವರಿಗೆ 1875ನೇ ಇಸವಿ ಡಿಶಂಬರ್ 29ನೇ ಮುಕ್ಕುಂ ಲಾಗಾಯತು 1876ನೇ ಇಸವಿ ಫಿಬ್ರವರಿ 3ನೇ ಮುಕ್ಕುಂ ವರಿಗೆ ಪ್ರವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕೊಡಗು ಫಸ್ಟ್ ಅಸಿಸ್ಟೆಂಟ್ ಸೂಪ್ರಿಟೆಂಡೆಂಟ್ ಮೇಜರ್ ಲೋರ್ಗ್ ಸಾಹೆಬರು, ಪ್ರವಿಲೀಜ್ ರಜಾ ಪಡೆದ ಮೇಜರ್ ತಾಮರ್ಸ ಸಾಹೆಬರ ಗೈರ್‌ಹಾಜರೀ ಕಾಲದಲ್ಲಿ ಕೊಡಗು ಸೂಪ್ರಿಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡಿದರು.

"ಬಮ್ಮೋಜಿಬ್ ಹುಕುಂ,"

T. CLARKE,
Offg. Secretary.

ಇಂಡ್ಯ ಗವರ್ಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಫಾರೆಸ್ಟ್ ಇಲಾಖೆ.

ನಂ. 169. G. ತಾರೀಖು 25ನೇ ಜನವರೀ 1876.

ಫಸ್ಟ್‌ಕ್ಲಾಸ್ ಡಿಪ್ಟಿ ಕಮ್ಮಿಷನ್ನರ್ ಲೆಫ್ಟಿನೆಂಟ್ ಕರ್ನಲ್ H. M. ಯಲಿಯಟ್ ಸಾಹೆಬರು ಸರಕಾರ ನೌಕರೀ ಬಿಟ್ಟಿದ್ದರಿಂದ ಮೈಸೂರು ಕಮಿಷನ್ನಲ್ಲಿ ಇದರಡಿ ನಮೂದಿಸಲ್ಪಡುವ ಬಡ್ತೀಗಳು 1875ನೇ ಇಸವಿ ಡಿಸೆಂಬರು ಗುರ್ಯೇ ತಾರೀಖುಲಾಗಾಯಿತು ಜಾರೀಯಾದ್ದಾಗಿ ಮಂಜೂರ್ಮಾಡಲ್ಪಟ್ಟಿರುತ್ತೆ.

2ನೇ ಕ್ಲಾಸ್ ಡಿಪ್ಟಿ ಕಮಿಷನ್ನರ್ ಲೆಫ್ಟೆನೆಂಟ್ ಕರ್ನಲ್ ಪಕ್ಕ್ಲ್‌ಸಾಹೇಬರು 1ನೇ ಕ್ಲಾಸ್ ಡಿಪ್ಟಿ ಕಮಿಷನ್ನರಾಗಿರತಕ್ಕದ್ದು.

3ನೇ ಕ್ಲಾಸ್ ಡಿಪ್ಟಿ ಕಮ್ಮಿಷನ್ನರ್ ಮೇಸ್ಟರ್ ರಿಕ್ಕೆಟ್ಸ್ ಸಾಹೆಬರು 2ನೇ ಕ್ಲಾಸ್ ಡಿಪ್ಟಿ ಕಮಿಷನ್ನರಾಗಿ 1ನೇ ಕ್ಲಾಸ್ ಡಿಪ್ಟಿ ಕಮಿಷನ್ನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತ್ತಿರತಕ್ಕದ್ದು.

4ನೇ ಕ್ಲಾಸ್ ಡಿಪ್ಟಿ ಕಮಿಷನ್ನರ್ ಕೆಪ್ಟ್ ಕಮಿಂಗ್ ಸಾಹೆಬರು 3ನೇ ಕ್ಲಾಸ್ ಡಿಪ್ಯುಟಿ ಕಮಿಷನ್ನರಾಗಿರತಕ್ಕದ್ದು.

1ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಮೇಜರ್ ಆರಮಸ್ಟ್ರಾಂಗ್ ಸಾಹೇಬರು 4ನೇ ಕ್ಲಾಸ್ ಡಿಪ್ಟಿ ಕಮಿಷನರಾಗಿ 2ನೇ ಕ್ಲಾಸ್ ಡಿಪ್ಟಿ ಕಮಿಷನ್ನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತ್ತಿರತಕ್ಕದ್ದು.

2ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೇಜರ್ ಲೋರ್ಗ್ ಸಾಹೆಬರು 1ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರಾಗಿರತಕ್ಕದ್ದು.

3ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಕೆಪ್ಟ್ ಬ್ಯೇರ್ ಸಾಹೆಬರು, 2ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿ 4ನೇ ಕ್ಲಾಸ್ ಡಿಪ್ಟಿ ಕಮಿಷನ್ನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತ್ತಿರತಕ್ಕದ್ದು.

4ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಕೆಪ್ಟ್ ಮಗ್ರಾತ್ ಸಾಹೆಬರು 3ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿರತಕ್ಕದ್ದು.

4ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ನರಸಿಂಹೈಯಂಗಾರ್ಯವರು 3ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿರತಕ್ಕದ್ದು.

5ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಬಿ. ಶ್ರೀನಿವಾಸೈಯಂಗಾರ್ಯವರು 4ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿರತಕ್ಕದ್ದು.

6ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಮೆಸ್ಟರ್ ಕಿಟ್ಟೂಯವರು 5ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿರತಕ್ಕದ್ದು.

3ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಕೆಪ್ಟ್ ಮೆಕ್ಕಂಜಿ ಸಾಹೆಬರು 1ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

3ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ಕೇಪ್ಟ್ ಮಗ್ರಾತ್ ಸಾಹೆಬರು 2ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರಾಗಿ ಆಕ್ಟಿಂಗ್ ತರೀಕ್ ಕೆಲಸನೋಡತಕ್ಕದ್ದು.

4ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನ್ನರ್ ವೆಂಕಟವರದೈಯಂಗಾರ್ ಯವರು 3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

C. U. AITCHISON,
Secy. to the Govt. of India.